**OS.No.**38/2023

**ಪಿ ಡಬ್ಲ್ಯೂ: 1**

**ದಿ: 14-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ನಮ್ಮ ತಂದೆ ತಾಯಿಗೆ ನಾವು 3 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣುಮಗಳು. ನಮ್ಮ ತಾಯಿಯ ಹೆಸರು ಕರಿಬಸಮ್ಮ ಇರುತ್ತದೆ. ನನ್ನ ತಾಯಿ ಮತ್ತು ತಂಗಿ ಸೇರಿ ನಮ್ಮ 3 ಜನ ಸಹೋದರರ ವಿರುದ್ಧ ಹಿಸ್ಸೆ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಆ ದಾವಾದಲ್ಲಿ ಈ ದಾವಾದ ಆಸ್ತಿಯನ್ನು ಸೇರಿಸಿರಲಿಲ್ಲ. ನನ್ನ ತಾಯಿ ಮತ್ತು ತಂಗಿಯು ದಾಖಲಿಸಿದ ದಾವಾದ ಸಂ. 38/2020 ಎಂದರೆ ಸರಿ. ಆ ದಾವಾದಲ್ಲಿ ನಾವು ರಾಜಿ ಅರ್ಜಿ ಸಲ್ಲಿಸಿ ರಾಜಿ ಮಾಡಿಕೊಂಡಿದ್ದೆವು ಎಂದರೆ ಸರಿ. ಆ ದಾವಾದಲ್ಲಿ ನಾನು ನಮ್ಮ ವಕೀಲರ ಮೂಲಕ ತಕರಾರನ್ನು ಸಲ್ಲಿಸಿದ್ದೆ. ಆ ದಾವಾದಲ್ಲಿ ಈ ಪ್ರಸ್ತುತ ದಾವಾದ ಆಸ್ತಿಯು ಸಹ ಒಟ್ಟು ಕುಟುಂಬದ ಆಸ್ತಿ ಇದ್ದು ಅದನ್ನು ಸೇರಿಸಬೇಕು ಎಂದು ನನ್ನ ತಕರಾರಿನಲ್ಲಿ ಹೇಳಿದ್ದೆ. ನನಗೆ ಈ ದಾವಾದ ಆಸ್ತಿಯಲ್ಲಿಯೂ ಸಹ ಪಾಲು ಬೇಕು ಎಂದು ಹೇಳಿ ನನ್ನ ತಕರಾರಿನಲ್ಲಿ ಪ್ರತಿದಾವೆಯನ್ನು ದಾಖಲಿಸಿರಲಿಲ್ಲ. ನಾನು 1999 ರಲ್ಲಿ ಬೆಂಗಳೂರಿನಲ್ಲಿದ್ದೆ. 1990 ರಲ್ಲಿ ನಾನು ಬೆಂಗಳೂರಿಗೆ ಕೆಲಸಕ್ಕೆಂದು ಹೋಗಿದ್ದೆ. ನಾನು ಬೆಂಗಳೂರಿನಿಂದ 2019 ರಲ್ಲಿ ನಮ್ಮ ಊರಿಗೆ ಬಂದಿರುತ್ತೇನೆ. ನಾನು ಬೆಂಗಳೂರಿಗೆ ಹೋದ ನಂತರ ನಮ್ಮ ಊರಿನ ಕುಟುಂಬದ ಯಜಮಾನಿಕೆಯನ್ನು ನಮ್ಮ ತಂದೆ ಮಾಡುತ್ತಿದ್ದರು. ನಮ್ಮ ತಂದೆ ಕುಟುಂಬದ ಯಜಮಾನಿಕೆ ಮಾಡುವಾಗ ಕುಟುಂಬದ ನಿರ್ವಹಣೆ ಕಷ್ಟವಾಗಿತ್ತು. ನಮ್ಮ ತಂದೆಯವರು ಕುಟುಂಬದ ನಿರ್ವಹಣೆ ಕಷ್ಟವಾದಾಗ ಕೂಲಿಯನ್ನು ಮಾಡುತ್ತಿದ್ದರು, ನಾನೂ ಸಹ ಕುಟುಂಬಕ್ಕೆ ಹಣ ಕೊಡುತ್ತಿದ್ದೆ. ನಾನು ಬೆಂಗಳೂರಿಗೆ ಹೋದ ನಂತರ 2019 ರ ವರೆಗೆ ನಾನು ಎಲ್ಲಿ ಇರುತ್ತೇನೆ ನಮ್ಮ ಕುಟುಂಬದ ಯಾವುದೇ ಸದಸ್ಯರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ನಾನು ಹಣ ಕೊಟ್ಟ ಬಗ್ಗೆ ದಾಖಲೆ ಇರುತ್ತದೆಯೇ ಎಂದರೆ ಸಾಕ್ಷಿಯು ನಾನು ಹಣ ಡ್ರಾ ಮಾಡಿಕೊಂಡು ಬಂದು ಕುಟುಂಬದ ನಿರ್ವಹಣೆ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಾನು 1990 ರಿಂದ 2019 ರ ವರೆಗೆ ಕುಟುಂಬದ ನಿರ್ವಹಣೆಗೆ ಯಾವುದೇ ಆರ್ಥಿಕ ಸಹಾಯವನ್ನು ಮಾಡಿಲ್ಲ ಮತ್ತು ವ್ಯವಹಾರವನ್ನು ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಿಂದ 2019 ರಲ್ಲಿ ಬಂದ ನಂತರ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳು ಇದ್ದವು. ದಾವಾದ ಆಸ್ತಿಯು 2019 ರಲ್ಲಿ ನಮ್ಮ ತಂದೆಯವರ ಹೆಸರಿನಲ್ಲಿತ್ತು. ನ್ಯಾಯಾಲಯಕ್ಕೆ ಈ ದಾವೆಯನ್ನು ದಾಖಲಿಸಿದಾಗ 4 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. 4 ನೇ ಪ್ರತಿವಾದಿಗೆ ದಾವಾದ ಆಸ್ತಿಯು 1999 ರ ಕ್ರಯ ಪತ್ರದ ಮೂಲಕ

ಹೋಗಿರುತ್ತದೆ ಎಂದರೆ ಸರಿ. 1999 ರಿಂದ ಈ ದಾವೆಯನ್ನು ದಾಖಲಿಸುವವರೆಗೆ ದಾವಾದ ಆಸ್ತಿಯ ಸ್ವಾಧೀನದಲ್ಲಿ 4 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ನಾನು 1999 ರ ಕ್ರಯ ಪತ್ರವನ್ನು ನೋಡಿರುತ್ತೇನೆ. ನಮ್ಮ ಕುಟುಂಬದವರು ನಮ್ಮ ಊರಿನಲ್ಲಿ ಒಳ್ಳೆಯ ಗೌರವಸ್ಥ ಕುಟುಂಬದವರು ಎಂದರೆ ಸರಿ. 1999 ರಲ್ಲಿ ಆದ ಕ್ರಯ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ಸಹೋದರರು ಕುಟುಂಬದ ನಿರ್ವಹಣೆಗಾಗಿ ದಾವಾದ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿ ಬಂದ ಹಣವನ್ನು ನಮ್ಮ ಕುಟುಂಬದವರು ಕುಟುಂಬದ ನಿರ್ವಹಣೆಗಾಗಿ ಉಪಯೋಗಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯನ್ನು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಾದ ನಂತರ ನಾನು ನಮ್ಮ ಚಿತ್ರದುರ್ಗದ ವಕೀಲರ ಮೂಲಕ ನೋಟೀಸ್ ಕೊಟ್ಟಿದ್ದೆ ಎಂದರೆ ಸರಿ. ನಾನು ಸದರಿ ನೋಟೀಸನ್ನು ಅಸಲು ದಾವೆ ನಂ 38/2020 ನ್ನು ದಾಖಲಿಸುವ ಪೂರ್ವದಲ್ಲಿಯೇ ಕೊಟ್ಟಿದ್ದೆ ಎಂದರೆ ಸರಿ. ನಮ್ಮ ವಕೀಲರ ಮೂಲಕ ಕೊಟ್ಟ ನೋಟೀಸಿಗೆ 4 ನೇ ಪ್ರತಿವಾದಿಯು ಉತ್ತರ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವಾದ ಆಸ್ತಿಯ ಬಗ್ಗೆ ಅಸಲು ದಾವೆ ನಂ. 38/2020 ರಲ್ಲಿ ಹೇಳಿರಲಿಲ್ಲ ಎಂದರೆ ಸರಿ. ದಾವಾದ ಆಸ್ತಿಯನ್ನು ನಮ್ಮ ತಂದೆ ಮತ್ತು ಸಹೋದರರು ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿರುವ ಕಾರಣದಿಂದಲೇ ಅಸಲುದಾವೆ ನಂ 38/2020 ರಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ದಾವಾದ ಆ ಆಸ್ತಿಯನ್ನು ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿದ್ದರಿಂದ ಅದನ್ನು ಪ್ರಶ್ನೆ ಮಾಡುವ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 4 ನೇ ಪ್ರತಿವಾದಿ ಪರ ವಕೀಲರಿಂದ

2 ನೇ ಪ್ರತಿವಾದಿಯು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ, ಅಳವಡಿಸಿಕೊಳ್ಳಲಾಯಿತು.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.